'ಅಯ್ಯೋ, ಅಮ್ಮಾ...' ರೋಗ ಶಯ್ಯೆಯಿಂದ ನಾಣುವಿನ ದೀನ ಸ್ವರ ಕೇಳಿಸುತ್ತಿದೆ. ರೋಗವೂ ಹಸಿವೂ!

'ಅಮ್ಮಾ...'

'ಏನು ಮಗಳೇ..'

'ನಾನೊಂದು ವಿಷಯ ಹೇಳಲೇ'

'ಮಗಳೇ ಹೇಳು'

'ನೀನು ಒಪ್ಪಲಾರೆ...'

'ಇಲ್ಲ...'

'ನನ್ನಲ್ಲಿ ಸಿಟ್ಟಾಗುವೆಯಾ?'

'ಇಲ್ಲ; ಮಗಳೇ ಹೇಳು...'

'ನನಗೆ... ನನಗೆ... ಅನ್ನಿಸಿದೆ... ದೀಪ...'

ಲಕ್ಷ್ಮಿಗೆ ವಿಷಯ ಅರ್ಥವಾಯಿತು. ಅವಳ ಕಣ್ಣುಗಳು ಅದರಲ್ಲಿ ನೆಲೆಯೂರಲು ಆರಂಭಿಸಿ ಸ್ವಲ್ಪದಿನಗಳೇ ಆದವು.

'ಅದನ್ನು ತೆಗೆಯುವುದು ಪಾಪವಲ್ಲವೇ?'

'ಅಮ್ಮಾ, ನೀನ್ಯಾಕೆ ಮಕ್ಕಳು ಉಪವಾಸ ಬಿದ್ದು ಸಾಯುತ್ತಿರುವಾಗಲೂ ಪಾಪ ಪುಣ್ಯ...'

ಅಮ್ಮ ಯೋಚಿಸಿದಳು. ಮಗಳು ಹೇಳಿದ್ದರಲ್ಲಿ ಅರ್ಥವಿದೆ. ಹಸಿವು ಅಸಹನೀಯವಾಗಿದೆ. ಬಾವಿಯ ನೀರು ಕುಡಿದು ಎಷ್ಟು ದಿನ ಬದುಕುವುದು.

'ಕುಂಜಿ...'

'ಏನಮ್ಮಾ...'

'ಪ್ರತಾಪವಿರುವ ಮೂರ್ತಿಗಳು, ದೈವಗಳು ಕಟ್ಟೆಯಲ್ಲಿ...'

'ಅಮ್ಮ ಎಷ್ಟು ಬಡಿದುಕೊಂಡರೂ ಮೂರ್ತಿಗಳಿಗೂ ದೈವಗಳಿಗೂ ಹಸಿವಿಲ್ಲ ಅಮ್ಮ...'

'ಅಮ್ಮ, ನಿನಗ್ಯಾಕೊಂದು ಸಂಶಯ?'

'ಅಪ್ಪನಿಗೆ ತಿಳಿದರೊ...'

'ಅಪ್ಪನಿಗೆ ಹಸಿವಿಲ್ಲವೇ?'

'ನೀನು ಏನು ಬೇಕೋ, ಅದನ್ನು ಮಾಡು...'

ಕುಂಜಿ ಆ ದೀಪವನ್ನು ತೆಗೆದಳು. ವರ್ಷಗಳಿಂದ ಕಟ್ಟೆಯ ಮೇಲೆ ಹಚ್ಚಿಡುತ್ತಿದ್ದ ಆ ದೀಪ... ಅವಳ ಕೈ ಕಂಪಿಸಲಿಲ್ಲ. ಅಪ್ಪ ಕಾಣಬಹುದೇ ಎಂಬ ಭಯ ಮಾತ್ರವೇ ಅವಳಿಗಿತ್ತು. ಅವಳು ಆರ್ಮುಗನ ಕೈಯಲ್ಲಿ ದೀಪ ಕೊಟ್ಟು ಮೆತ್ತಗಿನ ಸ್ವರದಲ್ಲಿ ಹೇಳಿದಳು:

'ಇದನ್ನು ಮಾರಿ ಹಣ ತೆಗೆದುಕೊಂಡು ಬಾ...'



ಅವನು ದೀಪವನ್ನು ಕೈಯಲ್ಲಿ ಹಿಡಿದುಕೊಂಡು ಮಧ್ಯಾಹ್ನದ ಬಿಸಿಲನ್ನು ಲೆಕ್ಕಿಸದೆ ಅಂಗಕ್ಕಿಳಿದ.

ಮಲಗಿದ್ದಲ್ಲಿಂದಲೇ ನಾಣು ಅದನ್ನು ಕಂಡ. ಅವನಿಗೆ ಕೋಪವ್ವೋ, ಆತಂಕವೋ ಆಗಲಿಲ್ಲ. ಅಸಹಾಯಕ ಸ್ವರದಲ್ಲಿ ಅವನು ಕೂಗಿ ಹೇಳಿದ.

'ಆರ್ಮುಗಾ ಟೊಪ್ಪಿ ಕೊಡೆಯನ್ನು ತೆಗೆದುಕೊಳ್ಳಬಹುದಿತ್ತಲ್ಲ; ಎಂತಹಾ ಬಿಸಿಲು!'

●